# ಯಾರನ್ನೂ ನೋಯಿಸಬಾರದು.

ಮಹಮ್ಮದ್ ಪೈಗಂಬರರು ತಮ್ಮ ಅಳಿಯ ಹಜರತ್‌ನೊಡನೆ ಊರಿಂದ ಊರಿಗೆ ಹೋಗುತ್ತಿದ್ದರು. ದಾರಿಯಲ್ಲಿ ಹಜರತ್‌ನ ಶತ್ರುವೊಬ್ಬನು ಇದಿರಾದನು. ಅವನು ಹಜರತ್‌ನನ್ನು ದಾರಿ ಮಧ್ಯದಲ್ಲಿ ನಿಲ್ಲಿಸಿ ಅವನನ್ನು ಬಾಯಿಗೆ ಬಂದಂತೆ ಬೈಯತೊಡಗಿದನು. ಹಜರತ್ ಸ್ವಲ್ಪ ಹೊತ್ತು ತಾಳ್ಮೆಯಿಂದ ಕೇಳಿದ. ಮೊದಲೆ ದಣಿದಿದ್ದ ಅವನಿಗೆ ಇನ್ನು ತಡೆಯಲಾಗಲಿಲ್ಲ. ಅವನೂ ಪ್ರತಿಯಾಗಿ ಬೈಯತೊಡಗಿದನು.

ಇದನ್ನು ನೋಡಿ ಮಹಮ್ಮದರು ಮುಂದೆ ನಡೆದರು. ಹಜರತ್‌ನು ಬೈಯುವುದನ್ನು ನಿಲ್ಲಿಸಿ, ಬೇಗನೇ ನಡೆದು ಮಹಮ್ಮದ್ ಪೈಗಂಬರ್‌ರನ್ನು ಸಮೀಪಿಸಿದನು.

"ನನ್ನನ್ನು ಆ ದುಷ್ಟನೊಡನೆ ಬಿಟ್ಟು ಮುಂದೆ ಬಂದಿರಿ ಏಕೆ?" —ಹಜರತ್ ಕೇಳಿದ.

ಮಹಮ್ಮದ್ ಉತ್ತರಿಸಿದರು: "ನೀನು ಮೌನದಲ್ಲಿದ್ದಾಗ ದೇವರು ನಿನ್ನ ಸುತ್ತ ರಕ್ಷಿಸುತ್ತಿದ್ದನು. ನೀನೇ ಬೈಯಲು ಪ್ರಾರಂಭಿಸಿದಾಗ ಅವನು ಹೊರಟುಹೋದನು.

ಮಾತಿನ ಮೂಲಕವಾಗಲಿ, ಕೃತಿಯ ಮೂಲಕವಾಗಲಿ, ಮನಸ್ಸಿನ ಮೂಲಕವಾಗಲಿ ಯಾರನ್ನೂ ನೋಯಿಸಬಾರದು.



ಕಲೆ : ಪುರುಷೋತ್ತಮ ಕಾರಂತ